ರೋಚಕ. ಆಗಿನ್ನು ನಾನು 35ರ ಆಸುಪಾಸಿನ ಯುವಕ. ರಾಮನಗರದಲ್ಲಿ ನನ್ನ ಭಾಗದ ಚಿತ್ರೀಕರಣವಿತ್ತು. ಬಿ.ಸಿ. ಗೌರಿಶಂಕರ ಛಾಯಾಗ್ರಾಹಕರು. ನಾಗಿಣಿಭರಣ ತಮ್ಮ ವಾಹನದಲ್ಲಿ ಕರೆದೊಯ್ಯುವಾಗ ನನ್ನ ಹಾಡು ಕೇಳಿಸಿದ್ದರು. ರಾಜು ಅನಂತಸ್ವಾಮಿ ಹಾಡಿದ ಆ ಹಾಡು ಕೇಳಿ ಪುಳಕಗೊಂಡಿದ್ದೆ. ಈಗ ನೀವೇ ಅಂದಂತೆ ಕನ್ನಡಿಗರ ಬಾಯಲ್ಲಿ ಅದು ನಲಿಯುತ್ತಲೇ ಇದೆ.



ಸುಮಾರು ಒಂದುವರೆ ಕೋಟಿಯಷ್ಟು ಜನ ಯುಟ್ಯೂಬಿನಲ್ಲಿ ಇದನ್ನು ಕೇಳಿದ್ದಾರೆ. ಯುವ ಪ್ರೇಮಿಗಳಿಗಂತೂ ಇದು ನೆಚ್ಚಿನ ಹಾಡಾಗಿದೆ. ಆಟೋರಿಕ್ಷಾ, ಟ್ರಕ್, ಬಸ್, ಟ್ರ್ಯಾಕ್ಟರ್, ಮದುವೆ, ಸಭೆ ಸಮಾರಂಭಗಳಲ್ಲಿ, ಗೂಡಂಗಡಿಗಳಲ್ಲಿ ಹಾಡಿದವರಿದ್ದಾರೆ. ಈ ಹಾಡಿನ ಪ್ರೇರಣೆಯಿಂದ ಮದುವೆಯಾದವರಿದ್ದಾರೆ. ಮೊಬೈಲ್ ರಿಂಗ್ ಟೋನ್ ಆಗಿಯೂ ಬಳಕೆಯಾಗುತ್ತಿದೆ. ರಾಜಕಾರಣಿಗಳು ಕೂಡ ಇದರ ರಿಂಗ್ ಟೋನ್ ಇಟ್ಟುಕೊಂಡಿದ್ದಾರೆ. ಹಾಡು ಕೇಳಿ ನಿತ್ಯ ಹತ್ತಾರು ಜನ ಕರೆ ಮಾಡುತ್ತಲೇ ಇರುತ್ತಾರೆ. ಮದುವೆಯಾದ/ ಮದುವೆಯಾಗದ ಯುವತಿಯರು, ಯಾವಾಗ ಬರೆದದ್ದು? ಪ್ರೇರಣೆ ಯಾರು? ಎಂದು ಕೇಳುತ್ತಾರೆ. ನನಗೆ ಈ ಹಾಡಿನಿಂದ ಒಂದು ಪೈಸೆ ಲಾಭವಾಗಿಲ್ಲ. ಕೇಳಿದ ಪ್ರತಿಯೊಬ್ಬರೂ ಒಂದೊಂದು ರೂಪಾಯಿ ಕೊಟ್ಟಿದ್ದರೆ ನಾನು ಕೋಟ್ಯಧೀಶನಾಗಿರುತ್ತಿದ್ದೆ. ಆದರೆ ಕೋಟಿ ಕೋಟಿ ಅಭಿಮಾನಿಗಳ ಪ್ರೀತಿ ಸಿಕ್ಕಿದೆ. ನನ್ನ ಮಗನ ಒತ್ತಾಯಕ್ಕೆ ಇದೇ ಹಾಡಿನ ರಿಂಗ್ ಟೋನ್ ಅನ್ನು ನನ್ನ ಮೊಬೈಲ್‌ಗೆ ಇಟ್ಟುಕೊಂಡಿದ್ದೇನೆ. ಈ ರಿಂಗ್ ಟೋನ್‌ಗಾಗಿ ನಾನು ಮೊಬೈಲ್ ಕಂಪನಿಗೆ ಪ್ರತಿ ತಿಂಗಳು 35 ರೂಪಾಯಿ ಕಟ್ಟುತ್ತಿದ್ದೇನೆ ಎಂದರೆ ನೀವು ನಗಬಹುದು.

ಈ ಹಾಡು ಕೇಳಿ ಅತ್ತ ಚಲನಚಿತ್ರ ನಿರ್ದೇಶಕ ಎಸ್.